ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಾಕ್ಷಿಗೆ ಆರ್ ಎ ಟಿ ಟೆಸ್ಟ್ ಮಾಡಲಾಗಿದ್ದು, ನೆಗೆಟಿವ್ ಬಂದ ಕಾರಣ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಅವಕಾಶ ಕೊಡಲಾಗಿದೆ.

ಸಿ.ಸಿ. ಸಂಖ್ಯೆ **66/2013**

| | | |
|---|---|---|
| ಸಾಕ್ಷಿದಾರರ ಹೆಸರು | ಹೆಚ್ ಎಂ ಸಿದ್ದಬಸವೇಗೌಡ | ಸಿ.ಡಬ್ಲ್ಯೂ-**1** |
| | | ಪಿ.ಡಬ್ಲ್ಯೂ **1** |
| ತಂದೆಯ ಹೆಸರು | ಲೇ. ಮಲ್ಲೇಗೌಡ | ದಿನಾಂಕ – **09-12-2020** |
| ವಯಸ್ಸು | **68** ವರ್ಷ | |
| ವೃತ್ತಿ | ನಿವೃತ್ತಿ ಗ್ರಾಮ ಪಂಚಾಯಿತಿ ಅಧ್ಯಕ್ಷರು | |
| ವಾಸಸ್ಥಳ | ಆಲೂರು | |

ಪ್ರಮಾಣ ವಚನ ಬೊಧಿಸಲಾಯಿತು.

ಮುಖ್ಯ ವಿಚಾರಣೆ ಃ ಎ ಪಿ ಪಿ ಯವರಿಂದ

ದಿಃ**01-04-2008** ರಂದು ನಾನು **24-08-2009** ರವರೆಗೆ ಮಳಲಿ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಸಹಿ ನಕಲು ಮಾಡಿ ಕರ ವಸೂಲಿಗಾರ ಟಿ.ಪಿ.ಮೋಹನ್ ರಾಜುರವರು ಹಣ ದುರುಪಯೋಗ ಮಾಡಿಕೊಂಡ ಬಗ್ಗೆ ನಾನು ಈಗ ತೋರಿಸಿದ ದೂರಿನ ಪ್ರಕಾರ ದೂರು ಕೊಟ್ಟಿದ್ದು ನಿಪಿ-**1**, ನನ್ನ ಸಹಿ ನಿಪಿ-**1** ಎ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಾನು ಮಳಲಿ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಆಗಿದ್ದೆ. ಆಶ್ರಯ ಅಂಬೇಡ್ಕರ್ ಮತ್ತು ಇಂದಿರಾ ಯೋಜನೆಯ ಫಲಾನುಭವಿಗಳಿಗೆ ಕೊಟ್ಟ ಚೆಕ್ಕುಗಳು ಬ್ಯಾಂಕಿನಿಂದ ವಾಪಾಸು ಬಂದ ಕಾರಣ, ಈ ಬಗ್ಗೆ ನಾವು ಬ್ಯಾಂಕಿಗೆ ಹೋಗಿ ಪರಿಶೀಲಿಸಿದಾಗ ನಮಗೆ ಈ ಮೋಸದ ಬಗ್ಗೆ ತಿಳಿದು ಬಂತು. ಎಸ್ ಬಿ ಎಂ ಶಾಖೆಯ **96** ಚೆಕ್ಕುಗಳು ಪರಿಶೀಲಿಸಿದಾಗ ಈ ಮೊಸದ ಬಗ್ಗೆ ಗೊತ್ತಾಯಿತು. ಕಾರ್ಪೊರೇಶನ್ ಬ್ಯಾಂಕಿನಲ್ಲಿ ನಿದಿ **1** ಮತ್ತು ನಿದಿ **2** ನರೆಗ ಮತ್ತು ಶೌಚಾಲಯ ಫಲಾನುಭವಿಗಳಿಗೆ ಕೊಟ್ಟ ಚೆಕ್ಕುಗಳು ಖಾತೆಯಲ್ಲಿ ಹಣ ಇಲ್ಲ ಎಂದು ವಾಪಾಸು ಬಂದಿತ್ತು ಸರ್ಕಾರದಿಂದ ಫಲಾನುಭವಿಗಳ ಖಾತೆಗೆ ಹಣ ಜಮಾ ಆಗಿದ್ದು, ಸದರಿ ಹಣವನ್ನು ಆರೋಪಿಯು ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ನಕಲು ಸಹಿ ಹಾಕಿ ಬ್ಯಾಂಕಿನಿಂದ ಹಣ ಡ್ರಾ ಮಾಡಿಕೊಂಡಿರುತ್ತಾರೆ. ಬ್ಯಾಂಕ್ ಪಾಸ್ ಪುಸ್ತಕ ಶಿಟನ್ನು ತೆಗೆದು ನೋಡಿದಾಗ ಗ್ರಾಮ ಪಂಚಾಯಿತಿ

ಖಾತೆಯಲ್ಲಿ ಹಣ ಇಲ್ಲ ಎಂದು ಗೊತ್ತಾಯಿತು. ನಂತರ ಪೊಲೀಸರು ಬಂದು ಮಹಜರು ಮಾಡಿ ಗ್ರಾಮ ಪಂಚಾಯಿತಿ ಸೀಲುಗಳು, ಅಧ್ಯಕ್ಷರ ಹೆಸರಿನಲ್ಲಿ ಇರುವ **2** ಸೀಲು, ಗ್ರಾಮ ಪಂಚಾಯಿತು ಕಾರ್ಯದರ್ಶಿ ರವರ ಹೆಸರಿನಲ್ಲಿ ಇರುವ **2** ಸೀಲುಗಳುನ್ನು ಅಮಾನತುಪಡಿಸಿಕೊಂಡರು. ನಂತರ ದಾಖಲಾತಿಗಳನ್ನು ಪೊಲೀಸರು ಸೀಜ್ ಮಾಡಿರುತ್ತಾರೆ. **100** ರೂ. ಬಾಂಡ್ ಪೇಪರಿನ ತಪ್ಪೊಪ್ಪಿಗೆ ಪತ್ರವನ್ನು ಪಡೆದುಕೊಂಡಿರುತ್ತಾರೆ **01-10-2009** ರಂದು ನಾನು ಪಿರ್ಯಾದಿ ಕೊಟ್ಟಿದ್ದೇನೆ. **3** ದಿನ ಬಿಟ್ಟು ಪೊಲೀಸರು ಸ್ಥಳ ಮಹಜರು ಮಾಡಲು ಬಂದಿದ್ದರು. ನಂತರ ಸುಮಾರು ಒಂದು ತಿಂಗಳ ನಂತರ ಒಂದು ಅಮಾನತು ಮಹಜರನ್ನು ಪೊಲೀಸರು ಬರೆದಿದ್ದು ರಶೀದಿ ಪುಸ್ತಕಗಳು, ಗ್ರಾಮ ಪಂಚಾಯಿತಿ ನಿರ್ಣಯ ಪುಸ್ತಕಗಳು, ಪಲಾನುಭವಿಗಳ ಪಟ್ಟಿಯ ವಿವರ, ಎಲ್ಲಾ ಫಲಾನುಭವಿಗಳ ಪಟ್ಟಿಯ ಪುಸ್ತಕ ಇದನ್ನು ನನ್ನ ಸಮಕ್ಷಮ ಸ್ವಾಧೀನಪಡಿಸಿಕೊಂಡಿದ್ದಾರೆ. ಸದರಿ ಅಮಾನತು ಮಹಜರು ನಿಪಿ-**2,** ನನ್ನ ಸಹಿ ನಿಪಿ-**2** ಎ ಎಂದು ಗುರುತಿಸಲಾಯಿತು. ನಂತರ ಪೊಲೀಸರು ಬಂದು ನನ್ನ ಹಸ್ತಾಕ್ಷರ ಇರುವ ಪುಸ್ತಕಗಳನ್ನು ಕೇಳಿದ್ದು ಆ ಬಗ್ಗೆ ನಾನು ಒಂದು ಪುಸ್ತಕವನ್ನು ಪೊಲೀಸರಿಗೆ ಕೊಟ್ಟಿದ್ದೇನೆ, ಈ ಬಗ್ಗೆ ಮಹಜರು ಮಾಡಿದ್ದಾರೆ. ಈಗ ನನಗೆ ತೋರಿಸಿದ ಗ್ರಾಮ ಪಂಚಾಯಿತಿ ನಿರ್ಣಯ ಪುಸ್ತಕ ನಿಪಿ-**3,** ಗ್ರಾಮ ಪಂಚಾಯಿತಿ ಪರವಾನಗಿ ಪುಸ್ತಕ ನಿಪಿ-**4,** ಆಶ್ರಯ ಯೋಜನ ವಸತಿ ಯೇಜನೆಯ ಚೆಕ್ಕು ವಿತರಣೆ ವಹಿ ನಿಪಿ-**5,** ಇಂದಿರಾ ಅವಾಸ್ ಯೋಜನೆ ವಸತಿ ಫಲಾನುಭಗಳ ಚೆಕ್ಕು ವಿತರಣೆ ವಹಿ ನಿಪಿ-**6,** ಇಂದಿರಾ ಅವಾಸ್ ಯೋಜನೆ ವಸತಿಫಲಾನುಭವಿಗಳ ಪುಸ್ತಕ ನಿಪಿ-**7,** ಇಂದಿರಾ ಅವಾಸ್ ಯೋಜನೆ ವಸತಿಫಲಾನುಭವಿಗಳ ಚೆಕ್ಕು ವಿತರಣೆ ವಹಿ ನಿಪಿ-**8** ಆಶ್ರಯ ಯೋಜನೆ **2006-7** ನೇ ಡಿಸಿ ಬಿಲ್ಲು ವಹಿ ನಿಪಿ-**9,** ಆಶ್ರಯ ಯೋಜನ ಚೆಕ್ಕುವಿತರಣೆ ವಹಿ **2006-7** ನಿಪಿ-**10,** ಶೌಚಾಲಯ ನಿರ್ಮಲ ಗ್ರಾಮ ಯೋಜನೆಯ **2000-2001** ರ ದಾಸ್ತನು ವಿತರಣೆ ಮಾಹಿತಿ ಪುಸ್ತಕ ನಿಪಿ-**11,** ನಿರ್ಮಲ ಗ್ರಾಮ ಯೋಜನೆ ನಗದು ವಹಿ ನಿಪಿ-**12,** ಸಾದಿಲ್ವ ನಿಧಿ-**1** ಸಾದಿಲ್ವ ವಹಿ ನಿಪಿ-**13,** ಆಶ್ರಯ ಯೋಜನೆ ಫಲಾನುಭವಿಯ ವಿವರ ಪುಸ್ತಕ ನಿಪಿ-**14,** ನಿದಿ**1** ಸಾಮಾನ್ಯ ನಗದು ವಹಿ **2008-9** ಪುಸ್ತಕ ನಿಪಿ-**15, 12** ನೆ ಹಣಕಾಸು ಯೋಜನೆ ನಗದು ವಹಿ ನಿಪಿ-**16,** ಡಾ.ಅಂಬೇಡ್ಕರ್ ಯೋಜನೆ ಚೆಕ್ಕು ವಿವರ ನಿಪಿ-**17,** ನರೆಗ ನಗದು ವಹಿ ನಿಪಿ-**18,** ಡಾ.ಅಂಬೇಡ್ಕರ್ ಯೋಜನೆ ಚೆಕ್ಕು ವಿವರಣೆ ಮಾಹಿತಿ ನಿಪಿ-**19,** ನಿದಿ **2** ಸಾಮಾನ್ಯ ನಗದು ವಹಿ ನಿಪಿ-**20,** ನಿದಿ **2** ಸಾದಿಲ್ವಾರು ವಹಿ ನಿಪಿ-**21,** ನಿದಿ **2 2008-9** ಸಾಮಾನ್ಯ ನಗದು ವಹಿ ನಿಪಿ-**22,** ಸಿಬ್ಬಂದಿ ವೇತನ ವಹಿ **2006** ರಿಂದ **2008-9** ನಿಪಿ-**23,** ಸದಸ್ಯರ ಸಭಾಭತ್ಯೆ ತಖ್ತೆ ನಿಪಿ-**24,** ಮಳಲಿ ಗ್ರಾಮ ಪಂಚಾಯಿತಿ ಸಿಬ್ಬಂದಿಯ ವೇತನ ಬಟವಾಡೆ ತಖ್ತೆ ನಿಪಿ-**25,** ತೆರಿಗೆ ವಸುಲಾತಿ ಕಿರದಿ ಪುಸ್ತಕ ನಿಪಿ-**26,** ಸಾಮಾನ್ಯ ನಗದು ವಹಿ ನಿಪಿ-**27,** ನಿದಿ**2** ಮಳಲಿ ಪಂಚಾಯಿತ್ ಜಮಾ ವಹಿ ನಿಪಿ-**28,** ಕಟ್ಟಡ ಪರವಾನಗಿ ಪುಸ್ತಕ ನಿಪಿ-**29,** ಅಳತೆ ಪುಸ್ತಕ ನಿದಿ **2** ನಿಪಿ-**30,** ಕಂದಾಯ ರಶೀದಿ ಪುಸ್ತಕ **2009-10** ನಿಪಿ-**31,** ಕಂದಾಯ ರಶಿದಿ ಪುಸ್ತಕ **2008-09** ನಿಪಿ-**32,** ಕಂದಾಯ ರಶೀದಿ ಪುಸ್ತಕ **2007-08** ನಿಪಿ-**33,** ಮೆಶರ್ ಮೆಂಟ್ ಪುಸ್ತಕಗಳು **3** ಹಾಜರುಪಡಿಸಿದ್ದು ನಿಪಿ-**34** ರಿಂದ **36,** ನಿದಿ**1** ಪುಸ್ತಕ ನಿಪಿ-**37,** ನನ್ನ ಹಸ್ತಾಕ್ಷರದಲ್ಲಿ ಪೊಲೀಸರು ಬರೆಸಿಕೊಂಡ ಮಾದರಿ

ಬರವಣಿಗೆಗಳು ನೋಡಿ ಗುರುತಿಸಿದ್ದು ನಿಪಿ-**38** ರಿಂದ **47,** ನನ್ನ ಹಸ್ತಾಕ್ಷರದಲ್ಲಿ ಪೊಲೀಸರು ಬರೆಸಿಕೊಂಡ **1** ರಿಂದ **190** ರವರೆಗಿನ ಅಂಕಿ ಬರವಣಿಗೆ ನಿಪಿ-**48** ರಿಂದ **57** ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ    ಎಸ್ ವಿ ಎಸ್     ರವರಿಂದ ಆರೋಪಿಯ ಪರವಾಗಿಃ

ಹಲವಾರು ದಾಖಲೆಗಳನು ನಿಶಾನೆ ಎಂದು ಗುರುತಿಸಿದ ಕಾರಣ  ಅದನ್ನು ಪರಶೀಲಿಸಿ ಪಾಟೀ ಸವಾಲು ಮಾಡಲು ಸಮಯ ಕೇಳಿದ್ದು ಮತ್ತು ನ್ಯಾಯಾಲಯದ ಸಮಯ ಅವಕಾಶ ಮುಗಿದ ಕಾರಣ ಪಾಟೀ ಸವಾಲಿಗೆ ಸಮಯ ಅವಕಾಶ ಕೊಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.